# ನಗರಸಭಾ ಕಾರ್ಯಾಲಯ ರಾಬರ್ಟ್‌ಸನ್‌ಪೇಟೆ, ಕೆ.ಜಿ.ಎಫ್–563122

ಸಂಖ್ಯೆ:ನಸರ:ಕಿಅ(1)/18/2009–2010 ದಿ:04–12–2009

## *: : ಅಲ್ಪಾವಧಿ ಟೆಂಡರ್ ಪ್ರಕಟಣೆ : :*

ನಗರಸಭಾ ವ್ಯಾಪ್ತಿಯಲ್ಲಿ 2007–08 ನೇ ಸಾಲಿನಿಂದ 2009–10 ನೇ ಸಾಲಿನ ತನಕ 12ನೇ ಹಣಕಾಸು ಯೋಜನೆಯಡಿಯಲ್ಲಿ ಮಾನ್ಯ ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ರವರ ಆದೇಶದ ಸಂಖ್ಯೆ:ಪೌ.ನಿ./ತಾಂತ್ರಿ/12ನೇಹಣಕಾಸು/172/2005–06, ದಿನಾಂಕ 08–09–2009 ಹಾಗೂ 15–10–2009 ಮತ್ತು ಮಾನ್ಯ ಜಿಲ್ಲಾಧಿಕಾರಿಗಳ ಅನುಮೋದಿತ ಕ್ರಿಯಾ ಯೋಜನೆಯ ಆದೇಶಗಳ ಸಂಖ್ಯೆ ಜಿನಕೋ/ತಾಂತ್ರಿಕ/232/2009–10, ದಿನಾಂಕ:–14–09–2009 ಹಾಗೂ ಆದೇಶ ಸಂಖ್ಯೆ:ಜಿನಕೋ:ತಾಂತ್ರಿಕ:254/2009–10, ದಿನಾಂಕ: 09–10–2009 ಷರತ್ತುಗಳನ್ವಯ ನಗರಸಭೆ ವ್ಯಾಪ್ತಿಯಲ್ಲಿ ಕಾಮಗಾರಿ ಹಾಗೂ ಖರೀದಿಗಾಗಿ ದ್ವಿ ಲಕೋಟೆ ಪದ್ದತಿಯ ಸೀಲ್ ಮಾಡಿದ ಟೆಂಡರ್‌ಗಳನ್ನು ಕರೆದಿದ್ದು ಈ ಕಾಮಗಾರಿಗಳನ್ನು ತೆಗೆದುಕೊಳ್ಳಲು ಲೋಕೋಪಯೋಗಿ ಇಲಾಖೆ ಹಾಗು ಇನ್ನಿತರೆ ಸರ್ಕಾರಿ ಇಲಾಖೆಗಳಲ್ಲಿ ನೊಂದಾಯಿತ ಒಂದನೇ ದರ್ಜೆಯ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ಗಳನ್ನು ಕರೆದಿರುತ್ತದೆ. ಆಸಕ್ತಿವುಳ್ಳ ಗುತ್ತಿಗೆದಾರರು ಈ ಕೆಳಕಂಡ ವಿವರಗಳಂತೆ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ವಿವರವಾದ ಮಾಹಿತಿಗಾಗಿ **ಸಹಾಯಕ ಕಾರ್ಯಪಾಲಕ ಅಭಿಯಂತರರು, ನಗರಸಭೆ ರವರಿಂದ** ಕಛೇರಿಯ ಸೂಚನಾ ಫಲಕದಿಂದ, ಜಿಲ್ಲಾ ಟೆಂಡರ್ ಬುಲಿಟಿನ್‌ನಲ್ಲಿ ಅಥವಾ, www. robertsonpetcity.gov.in, ನಲ್ಲಿನ ವೆಬ್‌ಸೈಟ್ ನಿಂದ ವಿವರವಾದ ಮಾಹಿತಿಗಳನ್ನು ಪಡೆಯಬಹುದು.

| ಪ್ಯಾಕೇಜ್ ನಂ. | ಕಾಮಗಾರಿಯ ಹೆಸರು | ಅಂದಾಜು ಮೊತ್ತ ಲಕ್ಷಗಳಲ್ಲಿ | ನಿಧಿ/ಯೋಜನೆ | ಟೆಂಡರ್‌ಗಿಟ್ಟ ಮೊತ್ತ ರೂ. ಲಕ್ಷಗಳಲ್ಲಿ | ಇ.ಎಂ.ಡಿ. ಮೊತ್ತ ರೂ.ಗಳಲ್ಲಿ | ಖಾಲಿ ಟೆಂಡರ್ ಫಾರಂ ಬೆಲೆರೂ. | ಕೆಲಸ ಪೂರ್ಣಗೊಳಿಸಬೇಕಾದ ಅವಧಿ | ಗುತ್ತಿಗೆದಾರರ /ಸರಬರಾಜುದಾರರ ದರ್ಜೆ |
|---|---|---|---|---|---|---|---|---|
| 1 | a) ನೆಲ ಭರ್ತಿ ಜಾಗಕ್ಕೆ ವಿದ್ಯುದೀಕರಣ, ಕಂಬಗಳು, 250 ವ್ಯಾಟ್ ಸೋಡಿಯಂ ದೀಪಗಳು ಮತ್ತು ನೀರಿನ ಪೈಪ್‌ಲೈನ್ಸ್ ಅಳವಡಿಸುವ ಕಾಮಗಾರಿ | 15.00 | 12 ನೇ ಹಣಕಾಸು ಯೋಜನೆ | 14.50 | 36250 | 2000 | 2 ತಿಂಗಳು | ಅಧಿಕೃತ ವಿದ್ಯುತ್ ಗುತ್ತಿಗೆದಾರರು |
| 2 | b) ಡಂಪರ್ ಪ್ಲೇಸರ್ ಕಂಟೈನರ್ ಸರಬರಾಜು | 35.00 | 12 ನೇ ಹಣಕಾಸು ಯೋಜನೆ | 35.00 | 70000 | 2000 | 1 ತಿಂಗಳು | ಅಧಿಕೃತ ಸರಬದಾರರು |
| 3 | c) ನೆಲ ಭರ್ತಿ ಜಾಗಕ್ಕೆ ಎಚ್.ಡಿ.ಪಿ.ಇ ಲೈನರ್ ಖರೀದಿ ಮತ್ತು ಅಳವಡಿಕೆ. | 05.00 | 12 ನೇ ಹಣಕಾಸು ಯೋಜನೆ | 5.00 | 12500 | 1000 | 1 ತಿಂಗಳು | ಅಧಿಕೃತ ಸರಬದಾರರು |

| | | | | | | | | |
|---|---|---|---|---|---|---|---|---|
| 4 | ಕಾರೋನೇಷನ್ ಟೌನ್, ರಾಬರ್ಟ್ಸನ್‌ಪೇಟೆಯಲ್ಲಿರುವ ಪೌರಾಯುಕ್ತರ ಮುನಿಸಿಪಲ್ ಕ್ವಾರ್ಟರ್ಸ್ ದುರಸ್ತಿ ಕಾಮಗಾರಿ | 5.00 | 12 ನೇ ಹಣಕಾಸು ಯೋಜನೆ ಮತ್ತು ನಗರಸಭೆ ನಿಧಿ | **4.91** | 12500 | 1000 | 2 ತಿಂಗಳು | 3ನೇ ದರ್ಜೆ ಮತ್ತು ಮೇಲ್ಪಟ್ಟು |
| 5 | a) ವಾರ್ಡ್ ನಂ. 12 ರ ಡಿಟೈಲ್ ಬ್ಲಾಕ್‌ನಲ್ಲಿ ಹೊಸ ಕೊಳವೆ ಬಾವಿ ಕೊರೆದು ಪಂಪು ಮೋಟಾರ್ ಹಾಗೂ ಪೈಪ್ ಲೈನ್‌ಗಳು ಅಳವಡಿಸುವ ಕಾಮಗಾರಿ. | 3.06 | 12 ನೇ ಹಣಕಾಸು ಯೋಜನೆ | **18.00** | 45000 | 2000 | 3 ತಿಂಗಳು | 2ನೇ ದರ್ಜೆ ಮತ್ತು ಮೇಲ್ಪಟ್ಟು |
| | b) ನಗರಸಭೆ ಕೆ.ಜಿ.ಎಫ್ ವ್ಯಾಪ್ತಿಯಲ್ಲಿ ವಿವಿಧ ವಾರ್ಡ್‌ಗಳಲ್ಲಿ ಪೈಪ್ ಲೈನ್ ಅಳವಡಿಸುವ ಕಾಮಗಾರಿ. | 3.25 | | | | | | |
| | c) ಬೌರಿಲಾಲ್‌ಪೇಟೆಯಲ್ಲಿ ಸಾರ್ವಜನಿಕ ಶೌಚಾಲಯ ನಿರ್ಮಾಣ. | 4.00 | | | | | | |
| | d) ವಾರ್ಡ್ ನಂ.11 ಮೈಸೂರು ಮೈನ್ಸ್‌ನಲ್ಲಿ ಪೈಪ್‌ಲೈನ್ ಕಾಮಗಾರಿ. | 2.25 | | | | | | |
| | e) ವಾರ್ಡ್ ನಂ.11 ಮಳಯಾಳಿ ಲೈನ್‌ನಲ್ಲಿ ಪಂಪ್ ಮೋಟಾರ್ ಹಾಗೂ ಪೈಪ್ ಲೈನ್ ಅಳವಡಿಸುವುದು. | 2.00 | | | | | | |
| | f) ವಾರ್ಡ್ ನಂ.12 ಬಿ' ಮಳಯಾಳಿ ಲೈನ್‌ನಲ್ಲಿ ಪಂಪ್ ಮೋಟಾರ್ ಹಾಗೂ ಪೈಪ್ ಅಳವಡಿಸುವುದು. | 2.00 | | | | | | |
| | g) ವಾರ್ಡ್ ನಂ.08 ಗಿಲ್‌ಬರ್ಟ್ಸ್‌ನಲ್ಲಿ ಪಂಪು ಮೋಟಾರ್ ಹಾಗೂ ಪೈಪ್‌ಲೈನ್ ಅಳವಡಿಸುವುದು. | 2.00 | | | | | | |

1) ಖಾಲಿ ಟೆಂಡರ್‌ಗಳಿಗೆ ಅರ್ಜಿ ಸಲ್ಲಿಸಿ ಟೆಂಡರ್‌ಗಳನ್ನು ಪಡೆಯುವ ದಿನಾಂಕ: 07–12–2009 ರಿಂದ 21–12–2009 ಸಂಜೆ 5:00 ಘಂಟೆಯವರೆಗು ನಗರಸಭಾ ರಾಬರ್ಟ್ಸನ್‌ಪೇಟೆ, ಕೆ.ಜಿ.ಎಫ್.
2) ಭರ್ತಿಮಾಡಿ ಸೀಲ್ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:22–12–2009, ಸಂಜೆ:5:00 ಘಂಟೆಯವರೆಗೆ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕೋಲಾರ.
3) ಟೆಂಡರ್‌ಗಳನ್ನು ಗುತ್ತಿಗೆದಾರರ ಸಮ್ಮುಖದಲ್ಲಿ ದಿನಾಂಕ 23–12–2009 ಸಂಜೆ 3:30 ಘಂಟೆಗೆ ಅಥವಾ ಮುಂದೆ ಸೂಚಿಸುವ ದಿನಾಂಕದಂದು, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕೋಲಾರದಲ್ಲಿ ತೆರೆಯಲಾಗುವುದು.

**:: ಷರತ್ತುಗಳು ::**

01. ಖಾಲಿ ಟೆಂಡರ್ ಫಾರಂ ಕೋರಿ ಅರ್ಜಿ ಸಲ್ಲಿಸುವ ಗುತ್ತಿಗೆದಾರರು/ಸರಬರಾಜುದಾರರು ಟೆಂಡರ್ ಫಾರಂ ಫೀ
ಪಾವತಿಸಿದ ರಸೀದಿ ಲಗತ್ತಿಸಿರಬೇಕು.

02. ಮುಂಗಡ ಠೇವಣಿಯನ್ನು ಡಿ.ಡಿ. ರೂಪದಲ್ಲಿ ಪೌರಾಯುಕ್ತರು, ನಗರಸಭೆ, ಕೆ.ಜಿ.ಎಫ್. ರವರ ಹೆಸರಿಗೆ ಪಡೆದು
ಲಗತ್ತಿಸುವುದು, ಮುಂಗಡ ಠೇವಣಿ ಇಲ್ಲದ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.

03. ಯಾವುದೇ ಮುನ್ಸೂಚನೆ ಇಲ್ಲದೆ, ಯಾವುದೇ ಕಾರಣ ನೀಡದೆ ಟೆಂಡರ್‌ನ್ನು ಮುಂದೂಡುವ, ತಿರಸ್ಕರಿಸುವ ಹಾಗು ಒಪ್ಪುವ ಹಕ್ಕು ನಗರಸಭೆಯ ಪೌರಾಯುಕ್ತರು ಹೊಂದಿರುತ್ತಾರೆ.

04. ಗುತ್ತಿಗೆದಾರರು/ಸರಬರಾಜುದಾರರು ಟೆಂಡರ್ ಫಾರಂಗಾಗಿ ಅರ್ಜಿ ಸಲ್ಲಿಸುವಾಗ ಚಾಲ್ತಿಯಲ್ಲಿರುವ ಲೋಕೋಪಯೋಗಿ
ನೋಂದಣಿ/ ಅಧಿಕೃತ ಸರಬರಾಜುದಾರರು ಪ್ರಮಾಣ ಪತ್ರ ಪ್ರತಿಯನ್ನು ಲಗ್ಗತ್ತಿಸುವುದು.

05. ನಗರಸಭೆಯು ಸೂಚಿಸುವ 3ನೇ ಸಂಸ್ಥೆಯಿಂದ ಕಾಮಾಗಾರಿಯ/ಸಾಮಗ್ರಿಯ ಗುಣಮಟ್ಟದ ಬಗ್ಗೆ ಪ್ರಮಾಣ ಪತ್ರವನ್ನು
ಸಲ್ಲಿಸುವುದು.

08. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ಸಹಿ/–
ಪೌರಾಯುಕ್ತರು
ನಗರಸಭೆ
ರಾಬರ್ಟ್‌ಸನ್‌ಪೇಟೆ, ಕೆ.ಜಿ.ಎಫ್.